ದಿನಾಂಕಃ 20.03.2023 ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ 22.08.2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ ಇ ಎಸ್ ವಕೀಲರಿಂದಃ **1** ರಿಂದ **3** ನೇ ಆರೋಪಿತರ ಪರವಾಗಿಃ

4. ಪುಟ್ಟಸ್ವಾಮಿರವರು ಮೃತಪಟ್ಟ ವಿಚಾರ ತಿಳಿದು ನೀವು ಆತನ ಶವ ಬಿದ್ದಿದ್ದ ಸ್ಥಳಕ್ಕೆ ಹೋದಾಗ ಅಲ್ಲಿ ಪೊಲೀಸರು ಮತ್ತು ಸಾರ್ವಜನಿಕರು ಸೇರಿದ್ದರು ಎಂದರೆ ಸರಿ. ಅಲ್ಲಿ ಪೊಲೀಸರು ಬರವಣಿಗೆಯನ್ನು ಮಾಡುತ್ತಿದ್ದರು ಎಂದರೆ ಸರಿ. ನೀವು ಅಲ್ಲಿಗೆ ಹೋದಾಗ ಪುಟ್ಟಸ್ವಾಮಿಯ ಸಾವು ಹೇಗೆ ಸಂಭವಿಸಿರಬಹುದು ಎಂದು ನೀವು ಮತ್ತು ಅಲ್ಲಿ ಸೇರಿದ್ದ ಜನರು ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನಾನು ಮಾತನಾಡುತ್ತಿರಲಿಲ್ಲ ಅಲ್ಲಿ ಸೇರಿದ್ದ ಜನರು ಮಾತನಾಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಆ ಸಮಯದಲ್ಲಿ ನೀವು ಕ್ವಾಲೀಸ್ ವಾಹನವನ್ನು ನೋಡಿದ್ದಾಗಿ ಮತ್ತು ಅದರಲ್ಲಿ ಪುಟ್ಟಸ್ವಾಮಿ ಮತ್ತು ಆತನ ಸ್ನೇಹಿತ ರಮೇಶ ಮತ್ತು ಇನ್ನೂ ಮೂರು ಜನ ವ್ಯಕ್ತಿಗಳು ಇದ್ದುದ್ದಾಗಿ ಪೊಲೀಸರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಆ ಸಮಯದಲ್ಲಿ ಪೊಲೀಸರು ನನ್ನನ್ನು ಕೇಳಿಲ್ಲ ಹಾಗಾಗಿ ಅಲ್ಲಿ ನಾನು ಆ ವಿಚಾರವನ್ನು ಹೇಳಿಲ್ಲ ಆದರೆ ನಂತರದಲ್ಲಿ ನನ್ನನ್ನು ವಿಚಾರಿಸಿದಾಗ ಆ ವಿಚಾರವನ್ನು ಹೇಳಿದ್ದೇನೆ ಎನ್ನುತ್ತಾರೆ.

5. ಆ ದಿನ ಪೊಲೀಸರು ನನ್ನನ್ನು ವಿಚಾರಿಸಲೇ ಇಲ್ಲ ಆದರೆ ಅದಾದ 4 ದಿನಗಳ ಬಳಿಕ ಪೊಲೀಸರು ನನ್ನನ್ನು ಕರೆಸಿ ವಿಚಾರಿಸಿದ್ದಾರೆ. ನಾನು ಇಂಜಿನಿಯರಿಂಗ್ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಪುಟ್ಟಸ್ವಾಮಿಯ ಶವ ದೊರೆತ ಹಿಂದಿನ ದಿನ ನೀವು ಕ್ವಾಲೀಸ್ ವಾಹನವನ್ನು ನೋಡಿದ್ದಾಗಿ ಮತ್ತು ಅದರಲ್ಲಿ ಪುಟ್ಟಸ್ವಾಮಿ

ಮತ್ತು ಆತನ ಸ್ನೇಹಿತ ರಮೇಶ ಮತ್ತು ಇನ್ನೂ ಮೂರು ಜನ ವ್ಯಕ್ತಿಗಳು ಇದ್ದುದ್ದಾಗಿ ಪೊಲೀಸರಿಗೆ ನೀವು ಪುಟ್ಟಸ್ವಾಮಿಯ ಶವವನ್ನು ನೋಡಿದ ದಿನವೇ ತಿಳಿಸಲು ನಿಮಗೆ ಏನಾದರೂ ತೊಂದರೆ ಇತ್ತೇ ಎಂದರೆ ಸಾಕ್ಷಿ ಆ ದಿನ ಪೊಲೀಸರು ನನ್ನನ್ನು ವಿಚಾರಿಸಿಲ್ಲ ಹಾಗಾಗಿ ತಿಳಿಸಿಲ್ಲ ಆದರೆ ನಂತರದಲ್ಲಿ ತಿಳಿಸಿದ್ದೇನೆ ಎನ್ನುತ್ತಾರೆ.

6. ಪುಟ್ಟಸ್ವಾಮಿಯ ಶವ ಸಿಕ್ಕ ದಿನ ನಾನು, ನನ್ನ ತಾಯಿ, ಗೀತಾ ಮತ್ತು ನಮ್ಮ ಮನೆಯಲ್ಲಿ ಇದ್ದ ಇತರ ಸಂಬಂಧಿಗಳು ಹೋಗಿದ್ದೇವೆ. ಸದರಿ ಇತರೆ ಸಂಬಂಧಿಕರ ಹೆಸರೇನು ಎಂದರೆ ಸಾಕ್ಷಿ ಸುಮಾ, ಲಕ್ಷ್ಮೀ, ಮಲ್ಲಿಕಾರ್ಜುನ್ ಮತ್ತು ಸೀನಾ ಎಂಬುವವರು ಎನ್ನುತ್ತಾರೆ. ನೀವು ಗೀತಾರವರ ಊರಿಗೆ ಹೋಗಿದ್ದಾಗಿ ಅಲ್ಲಿ ಕ್ವಾಲೀಸ್ ವಾಹನದಲ್ಲಿ ಪುಟ್ಟಸ್ವಾಮಿಯನ್ನು ಸೇರಿಸಿ ಐದು ಜನ ವ್ಯಕ್ತಿಗಳನ್ನು ನೋಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 15 ನೇ ತಾರೀಖಿನಂದು ನೀವು ಗೀತಾರವರ ಊರಿನಲ್ಲಿ ಇದ್ದಿರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆಗ ವಿಜಯದಶಮಿ ಹಬ್ಬವಿತ್ತು ಹಾಗಾಗಿ ನಾನು ಅವರ ಊರಿನಲ್ಲಿಯೇ ಇದ್ದೆನು ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್